2017 ಕ.ತೀ.ವ 1079

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

### ಕರ್ನಾಟಕ ರಾಜ್ಯ, ಯೆಲವಾಲ ಗ್ರಾಮೀಣ ಪೋಲೀಸ್ ಠಾಣೆಯಿಂದ ಪ್ರತಿನಿಧಿತ –ವಿರುದ್ಧ– ಸ್ವಾಮಿಗೌಡ @ ಸುಬ್ಬ ಮತ್ತು ಮತ್ತೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆ 377 ಮತ್ತು 378(1) ಮತ್ತು (3)

ಇಲ್ಲಿ ಅಪೀಲುಗಳು ಇತ್ಯರ್ಥದಲ್ಲಿರುವಾಗಲೇ 22.03.2008 ರಂದು ಪ್ರತ್ಯರ್ಜಿದಾರ ಸಂಖ್ಯೆ.1 ಇವನು ಮರಣ ಹೊಂದಿರುವುದು ವಿವಾದಾಂಶವಾಗಿರುವುದಿಲ್ಲ. ಅಪೀಲುಗಳು ಇತ್ಯರ್ಥದಲ್ಲಿರುವಾಗಲೇ ಪ್ರತ್ಯರ್ಜಿದಾರ ಸಂ.1 ಮರಣವನ್ನಪ್ಪಿರುವ ಕಾರಣದಿಂದ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 394ನೇ ಪ್ರಕರಣದ ದೃಷ್ಟಿಯಿಂದ ಈ ನ್ಯಾಯಾಲಯ ಪ್ರತ್ಯರ್ಜಿದಾರ ಸಂ.1 ವಿರುದ್ಧದ ಅಪೀಲುಗಳನ್ನು ಮುಕ್ತಾಯಗೊಳಿಸಿ ವಿಲೇ ಮಾಡುವುದನ್ನು ಹೊರತಾಗಿ ಪ್ರತ್ಯರ್ಜಿದಾರ ಸಂ.1 ವಿರುದ್ಧ ಅಪೀಲುಗಳಲ್ಲಿ ಮತ್ತಷ್ಟು ಮುಂದುವರೆಯುವುದಕ್ಕೆ ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಆದಾಗ್ಯೂ, ಅಪೀಲುಗಳನ್ನು ವಿಲೇ ಮಾಡುವ ಸಮಯದಲ್ಲಿ ಮರಣವನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ.

ನಮ್ಮ ಅಭಿಪ್ರಾಯದಲ್ಲಿ, ಮೊಕದ್ದಮೆಯ ತೀರ್ಪು ಅಥವಾ ಅಂತಿಮ ಆದೇಶ ವಿಲೇಯಾಗಿದ್ದರೆ. ಅದು ಕಾನೂನಿನಲ್ಲಿ ಅಕೃತತೆಯಾಗಿ ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿನ ಪ್ರತಿಷೇಧವು ಕಾರ್ಯಗತವಾಗುವುದಿಲ್ಲ. ಕಾನೂನಿನಲ್ಲಿ ಅಕೃತತೆಯಾಗಿರುವ ಮೃತ ವ್ಯಕ್ತಿಯ ವಿರುದ್ಧ ಈ ತೀರ್ಪು ಅಥವಾ ಹೊರಡಿಸಿದ ಆದೇಶವನ್ನು ಕಾನೂನಿನ ಸ್ಥಿತಿಯಲ್ಲಿ ಇತ್ಯರ್ಥಪಡಿಸಬೇಕಾಗುತ್ತದೆ. ಈ ನ್ಯಾಯಾಲಯ ಅಕೃತತೆಯಾಗಿರುವ ಪ್ರತ್ಯರ್ಜಿದಾರ ಸಂಖ್ಯೆ. 1 ಇವರ ವಿರುದ್ಧ ಈ ಎಲ್ಲ ಅಪೀಲುಗಳಲ್ಲಿ ದಿನಾಂಕ 28.07.2010ರಲ್ಲಿ ನೀಡಿದ ಸಾಮಾನ್ಯ ತೀರ್ಪಿನಲ್ಲಿ ಪ್ರತ್ಯರ್ಜಿದಾರ ಸಂಖ್ಯೆ 1 – ಸ್ವಾಮಿಗೌಡನ ಮರಣವನ್ನು ಗಮನಕ್ಕೆ ತಂದುಕೊಳ್ಳದೆ ಅಪೀಲುಗಳನ್ನು ವಿಲೇ

*ಕ್ರಿಮಿನಲ್ ಅಪೀಲು ಸಂ. 815/2004 ಇದರೊಂದಿಗೆ ಇತರೆ, ದಿನಾಂಕ: 16ನೇ ಆಗಸ್ಟ್, 2016.

**ಮಾಡಿರುತ್ತದೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 394ನೇ ಪ್ರಕರಣದ ದೃಷ್ಟಿಯಲ್ಲಿ ಅದು ಮರುವಿಚಾರಣೆಯನ್ನು ಅಗತ್ಯಪಡಿಸುತ್ತದೆ. ತದನುಸಾರವಾಗಿ ಅದನ್ನು ಮರು ವಿಚಾರಣೆ ಮಾಡುವುದು. ಪ್ರತ್ಯರ್ಜಿದಾರ ಸಂ.1ರ ವಿರುದ್ಧ ಇರುವ ಎಲ್ಲ ಅಪೀಲುಗಳನ್ನು ಮುಕ್ತಾಯವಾದಂತೆ, ವಿಲೇ ಮಾಡುವುದು. ಪ್ರತ್ಯರ್ಜಿದಾರ ಸಂ.2ರ ವಿರುದ್ಧ ದಿನಾಂಕ 28.07.2010 ರಂದು ಹೊರಡಿಸಿದ ಸಾಮಾನ್ಯ ತೀರ್ಪಿನ ಎಲ್ಲ ಅಪೀಲುಗಳು ನಿರಾತಂಕವಾಗಿ ಉಳಿಯುತ್ತವೆ. ಈ ಆದೇಶವನ್ನು ದಿನಾಂಕ 28.07.2010ರ ಸಾಮಾನ್ಯ ತೀರ್ಪಿನ ಭಾಗದಂತೆಯೇ ಪರಿಗಣಿಸತಕ್ಕದ್ದು. ಅದಕ್ಕೆ ಅನುಸಾರವಾಗಿ ಐಎ ಸಂ.1/2016ನ್ನು ವಿಲೇ ಮಾಡಲಾಗಿದೆ. ಮಧ್ಯಂತರ ತಡೆಯಾಜ್ಞೆಗಾಗಿ ಐಎ ಸಂ.2/2016 ರಲ್ಲಿ ದಾಖಲಿಸಿದ ಉಳಿದಿರುವ ಪ್ರತ್ಯರ್ಜಿದಾರನ ಸಂಬಂಧದಲ್ಲಿ ಪರಿಗಣನೆಗೆ ಉಳಿಯುವುದಿಲ್ಲ.**

**ಪ್ರಕರಣದ ಮೇಲಿನ ವಿಷಯಗಳ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.**

ಅರ್ಜಿದಾರರ ಪರವಾಗಿ: ಶ್ರೀ ವಿಜಯ ಕುಮಾರ್ ಮಜಗೆ, ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್;
ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಕೆ.ಎಸ್. ಚಂದ್ರಕಾಂತ್‌ಗೌಡ, ವಕೀಲರು.

## ಐಎ ಸಂಖ್ಯೆಗಳು 1 ಮತ್ತು 2/2016ರ ಮೇಲಿನ ಆಜ್ಞೆ

**ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್ (ಮೌಖಿಕ):**

1. ಅಪೀಲುಗಳು ಇತ್ಯರ್ಥದಲ್ಲಿದ್ದ ಅವಧಿಯಲ್ಲಿ ಪ್ರತ್ಯರ್ಜಿದಾರ ಸಂಖ್ಯೆ 1 ಇವನು ಮೃತನಾಗಿರುವ ಬಗ್ಗೆ ನ್ಯಾಯಾಲಯವು ಗಮನಿಸದೆ ಸದರಿ ಅಪೀಲುಗಳನ್ನು ವಿಲೆ ಮಾಡಲಾಗಿದೆ. ಆಧಾರದ ಮೇಲೆ ದಿನಾಂಕ 28.07.2010 ರಂದು ಈ ನ್ಯಾಯಾಲಯವು ನೀಡಿದ ಸಾಮಾನ್ಯ ತೀರ್ಪನ್ನು ಮಾರ್ಪಾಡು ಮಾಡುವುದಕ್ಕಾಗಿ ಮೃತ ಪ್ರತ್ಯರ್ಜಿದಾರ ಸಂಖ್ಯೆ 1ರ ವಿಧವೆ ಪತ್ನಿ ಕ್ರಿಮಿನಲ್ ಅಪೀಲನ್ನು ಸಂಖ್ಯೆ 815 ಮತ್ತು 816/2004ರ ಮೂಲಕ ಸದರಿ ಐ.ಎ. ಸಂ.1/2016 ನ್ನು ದಾಖಲಿಸಿದ್ದಾರೆ.

2. ಕರ್ನಾಟಕ ರಾಜ್ಯವು ಕ್ರಿಮಿನಲ್ ಅರ್ಜಿ ಸಂಖ್ಯೆ. 815/2004 ಮತ್ತು ಕ್ರಿಮಿನಲ್ ಅರ್ಜಿ ಸಂಖ್ಯೆ.816/2004 ಅನ್ನು ದಂಡ ಪ್ರಕ್ರಿಯಾ ಸಂಹಿತೆಯ ಅನುಕ್ರಮವಾದ 377 ಮತ್ತು 378ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿರುತ್ತದೆ. ಕ್ರಿಮಿನಲ್ ಅರ್ಜಿ ಸಂಖ್ಯೆ. 815/2004 ಅನ್ನು ಪ್ರಧಾನ ಸೆಷನ್ ನ್ಯಾಯಾಲಯದ ನ್ಯಾಯಾಧೀಶರು, ಮೈಸೂರು ಇವರು ಪ್ರತ್ಯರ್ಜಿದಾರ ಸಂಖ್ಯೆ 1 ದಂಡವಾಗಿ 5,000/– ರೂಪಾಯಿಗಳನ್ನು ಸಂದಾಯ ಮಾಡಲು, ದಂಡವನ್ನು ಸಂದಾಯ ಮಾಡಲು ತಪ್ಪಿದರೆ ಎರಡು ವರ್ಷಗಳ ಸಾದಾ ಕಾರವಾಸದ ಶಿಕ್ಷೆಯನ್ನು, ಮತ್ತು ಪ್ರತ್ಯರ್ಜಿದಾರ ಸಂಖ್ಯೆ 2 ಇವನಿಗೆ ದಂಡವಾಗಿ 3,000/– ರೂಪಾಯಿಗಳನ್ನು ಸಂದಾಯ ಮಾಡುವಂತೆ, ದಂಡವನ್ನು ಸಂದಾಯ ಮಾಡಲು ವಿಫಲನಾದರೆ ಒಂದು ವರ್ಷದ ಸಾದಾ ಕಾರವಾಸ ಶಿಕ್ಷೆಯನ್ನು ಅನುಭವಿಸುವಂತೆ ದಿನಾಂಕ 31.01.2004 ರಂದು 1999ರ ಎಸ್‌ಸಿ ಸಂ.9ರಲ್ಲಿ ಹೊರಡಿಸಿದ ದಂಡಾದೇಶದ ವಿರುದ್ಧ ಈ ಅಪೀಲನ್ನು ದಾಖಲಿಸಲಾಗಿದೆ. ಕ್ರಿ.ಅ.ಸಂ.816/2004 ಅನ್ನು ದಿನಾಂಕ 29.01.2004 ರಂದು ಹೊರಡಿಸಿದ ಮೇಲೆ ಹೇಳಲಾದ ಎಸ್.ಸಿ. ಸಂ.1999ರ 9ರಲ್ಲಿ ಭಾರತೀಯ ದಂಡ ಸಂಹಿತೆಯ 34ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ 326ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ದೋಷಿಯಾಗಿದ್ದರೂ ಸಹ ಭಾರತೀಯ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ 341 ಮತ್ತು 307ನೇ ಪ್ರಕರಣಗಳನ್ನು ಓದಿಕೊಳ್ಳುವುದರೊಂದಿಗೆ ದಂಡನೀಯ ಅಪರಾಧಗಳಿಂದ ಪ್ರತ್ಯರ್ಜಿದಾರರನ್ನು ಖುಲಾಸೆಗೊಳಿಸಿರುವ ನಿರ್ಣಯದ ವಿರುದ್ಧ ಈ ಅಪೀಲನ್ನು ದಾಖಲಿಸಲಾಗಿದೆ.

ಈ ನ್ಯಾಯಾಲಯವು ಮೇಲಿನ ಎರಡೂ ಅಪೀಲುಗಳನ್ನು ದಿನಾಂಕ 28.07.2010 ರಂದು ಸಂ.1 ಮತ್ತು 2ರ ಪ್ರತಿಯೊಬ್ಬ ಪ್ರತ್ಯರ್ಜಿದಾರನಿಗೆ ಮೂರು ತಿಂಗಳ ಕಠಿಣ ಕಾರವಾಸ ಶಿಕ್ಷೆ ಮತ್ತು 50,000/– ರೂಪಾಯಿಗಳ ಜುಲ್ಮಾನೆಯನ್ನು ಪಾವತಿಸುವ ಜುಲ್ಮಾನೆಯನ್ನು ಸಂದಾಯ ಮಾಡಲು ವಿಫಲವಾದರೆ ಆರು ತಿಂಗಳ ಕಾಲಗಳ ಸಾದಾ ಕಾರವಾಸ ಶಿಕ್ಷೆಗೆ ಗುರಿಯಾಗಬೇಕೆಂದು ದಂಡಾದೇಶವನ್ನು ಹೊರಡಿಸಿ ಅಪೀಲುಗಳನ್ನು ವಿಲೆ ಮಾಡಿದೆ. ವಿಚಾರಣಾ ನ್ಯಾಯಾಲಯವು ದಿನಾಂಕ 31.01.2004ರ ತನ್ನ ಆದೇಶವನ್ನು ಮಾರ್ಪಾಡಿಸಿ ಈ ದಂಡಾದೇಶವನ್ನು ವಿಧಿಸಿದೆ.

3. ಪ್ರತ್ಯರ್ಜಿದಾರ ಸಂಖ್ಯೆ.1 ಸ್ವಾಮಿಗೌಡ, ಇವನು ವಿಚಾರಣಾ ನ್ಯಾಯಾಲಯದ ಮುಂದೆ 1ನೇ ಸಂಖ್ಯೆಯ ಆಪಾದಿತನಾಗಿರುವವನು. ಇವನು ಅಪೀಲುಗಳು ಇತ್ಯರ್ಥದಲ್ಲಿರುವ ಸಮಯದಲ್ಲಿ ದಿನಾಂಕ 22.03.2008 ರಂದು ಮರಣವನ್ನಪ್ಪಿರುವನು ಮತ್ತು ಈ ನ್ಯಾಯಾಲಯವು ಅವರ ಮರಣವನ್ನು ಗಮನಕ್ಕೆ ತಂದುಕೊಳ್ಳದೆ ದಿನಾಂಕ 28.7.2010 ರಂದು ಅಪೀಲುಗಳನ್ನು ವಿಲೆ ಮಾಡಿರುತ್ತದೆ.

4. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಯು ಈ ಅಪೀಲುಗಳನ್ನು ವಿಲೆ ಮಾಡುವ ಸಮಯದಲ್ಲಿ ಈ ನ್ಯಾಯಾಲಯದ ಗಮನಕ್ಕೆ ಸ್ವಾಮಿಗೌಡ @ ಸುಬ್ಬ ಇವನು ಮರಣವನ್ನಪ್ಪಿರುವ ವಿಷಯವನ್ನು ತರದಿರುವ ಬಗ್ಗೆ ನಿವೇದಿಸಿದ್ದಾರೆ. ಅವರು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 394ನೇ ಪ್ರಕರಣವನ್ನು ಅವಲಂಬಿಸುವ ಮೂಲಕ, ಅವರು 1ನೇ ಪ್ರತ್ಯರ್ಜಿದಾರ ವಿರುದ್ಧ ನೀಡಿದ ದಿನಾಂಕ 28.07.2010ರ ಸಾಮಾನ್ಯ ತೀರ್ಪಿನ ಮರುವಿಚಾರಣೆ ಮಾಡುವುದಕ್ಕೆ ಅಗತ್ಯಪಡಿಸಲು ಮತ್ತು ಪ್ರತ್ಯರ್ಜಿದಾರ ಸಂ.1 ವಿರುದ್ಧದ ಎರಡು ಅಪೀಲುಗಳನ್ನು ಮುಕ್ತಾಯಗೊಳಿಸಿ ವಿಲೇ ಮಾಡಲು ನಿವೇದಿಸಿರುವರು.

5. ರಾಜ್ಯದ ಪರವಾಗಿ ಮಾನ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಜರಾಗಿರುವರು, ಅವರು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 362ನೇ ಪ್ರಕರಣದ ಮೇಲೆ ಅವಲಂಬಿತವಾಗಿ ಮೊಕದ್ದಮೆಯ ಅಂತಿಮ ಆದೇಶವಾಗಿ ಸಹಿಯಾದ ತೀರ್ಪನ್ನು ಕೈ ತಪ್ಪಿನ ಅಥವಾ ಗಣಕದ ದೋಷವನ್ನು ಸರಿಪಡಿಸುವುದಕ್ಕೆ ಹೊರತುಪಡಿಸಿ ನಂತರದಲ್ಲಿ ಈ ನ್ಯಾಯಾಲಯಕ್ಕೆ ತೀರ್ಪನ್ನು ಮಾರ್ಪಾಡುಗೊಳಿಸಿ ಅಥವಾ ಮರು ಪರಿಶೀಲಿಸುವುದಕ್ಕೆ ಅಥವಾ ವಿಲೇ ಮಾಡಲು ಅಧಿಕಾರವಿರುವುದಿಲ್ಲ. ಆದುದರಿಂದ, ಅವರು ಐಎ ಸಂ.1/2016ರಲ್ಲಿರುವ ಅರ್ಜಿಯನ್ನು ವಜಾ ಮಾಡಲು ನಿವೇದಿಸಿರುವರು.

6. ಪ್ರತಿಸ್ಪರ್ಧಿಗಳ ವಾದಾಂಶಗಳನ್ನು ಪರಿಶೀಲಿಸುವುದಕ್ಕೆ ಅವಶ್ಯಕವಾಗಿರುವ ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 394ನೇ ಮತ್ತು 362ನೇ ಪ್ರಕರಣದ ಉಲ್ಲೇಖವು ಈ ಮುಂದಿನಂತಿದೆ:

***394. ಅಪೀಲುಗಳು ಕೊನೆಗೊಳ್ಳುವುದು*** *.– (1) 377ನೇ ಅಥವಾ 378ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲು ಆಪಾದಿತನ ಮರಣದಿಂದ ಕೊನೆಗೊಳ್ಳತಕ್ಕುದು.*

*(2) ಈ ಅಧ್ಯಾಯದ ಮೇರೆಗಿನ ಇತರ ಪ್ರತಿಯೊಂದು ಅಪೀಲು (ಜುಲ್ಮಾನೆಯ ದಂಡಾದೇಶದ ಮೇಲಿನ ಅಪೀಲಿನ ಹೊರತು) ಅಪೀಲುದಾರನ ಮರಣದಿಂದ ಕೊನೆಗೊಳ್ಳತಕ್ಕುದು :*

*ಪರಂತು, ಅದು ಅಪರಾಧ ನಿರ್ಣಯ ಮತ್ತು ಮರಣ ಅಥವಾ ಕಾರಾವಾಸದ ದಂಡಾದೇಶದ ವಿರುದ್ಧದ ಅಪೀಲಾಗಿರುವಲ್ಲಿ, ಮತ್ತು ಅಪೀಲು ಇತ್ಯರ್ಥವಾಗುವುದಕ್ಕೆ ಮುಂಚೆ ಅಪೀಲುದಾರನು ಮೃತಪಟ್ಟಾಗ, ಆತನ ಹತ್ತಿರದ ಬಂಧು ಯಾರಾದರೂ ಅಪೀಲುದಾರನು ಮರಣ ಹೊಂದಿದ ಮೂವತ್ತು ದಿನಗಳೊಳಗಾಗಿ ಅಪೀಲನ್ನು ಮುಂದುವರಿಸಲು ಅನುಮತಿಗಾಗಿ, ಅಪೀಲು ನ್ಯಾಯಾಲಯಕ್ಕೆ ನಿವೇದನೆ ಮಾಡಬಹುದು ; ಮತ್ತು ಅನುಮತಿ ದೊರೆತರೆ, ಆ ಅಪೀಲು ಕೊನೆಗೊಳ್ಳತಕ್ಕುದಲ್ಲ.*

***ವಿವರಣೆ*** *: ಈ ಪ್ರಕರಣದಲ್ಲಿ " ಹತ್ತಿರದ ಬಂಧು " ಎಂದರೆ ತಂದೆ, ತಾಯಿ, ಪತಿ, ಪತ್ನಿ, ವಂಶಜ, ಸೋದರ ಅಥವಾ ಸೋದರಿ.*

***362. ನ್ಯಾಯಾಲಯವು ತೀರ್ಪನ್ನು ಬದಲಾಯಿಸತಕ್ಕುದಲ್ಲ.–*** *ಈ ಸಂಹಿತೆಯಿಂದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ವಿಧಿಯಿಂದ ಅನ್ಯಥಾ ಉಪಬಂಧಿತವಾಗಿದ್ದ ಹೊರತು, ಯಾವುದೇ ನ್ಯಾಯಾಲಯವು, ಅದು ಮೊಕದ್ದಮೆಯನ್ನು ವಿಲೆ ಮಾಡುವ ತನ್ನ ತೀರ್ಪಿಗೆ ಅಥವಾ ಅಂತಿಮ ಆದೇಶಕ್ಕೆ ಸಹಿ ಹಾಕಿರುವಾಗ, ಬರವಣಿಗೆಯ ಅಥವಾ ಅಂಕಿಗಳ ತಪ್ಪನ್ನು ತಿದ್ದುವುದರ ಹೊರತು, ಅದನ್ನು ಬದಲಾಯಿಸತಕ್ಕುದಲ್ಲ ಅಥವಾ ; ಪುನರ್ವಿಲೋಕಿಸತಕ್ಕುದಲ್ಲ.*

7. ಮೇಲೆ ಉದ್ಧೃತ ಮಾಡಿರುವ ದಂಡ ಪ್ರಕ್ರಿಯಾ ಸಂಹಿತೆಯ 394ನೇ ಪ್ರಕರಣದ ಉದ್ಧೃತ ಭಾಗವು ಸ್ಪಷ್ಟವಾಗಿ, ಮೃತ ಆಪಾದಿತನ ಮೇಲೆ ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 377ನೇ ಪ್ರಕರಣ ಅಥವಾ 378ನೇ ಪ್ರಕರಣದ ಅಡಿಯಲ್ಲಿನ ಈ ಅಪೀಲುಗಳನ್ನು ನ್ಯಾಯಾಲಯ ಮುಕ್ತಾಯಗೊಳಿಸಬಹುದಾದಂಥ ಅಪೀಲುಗಳೆಂದು ವಿಲೇ ಮಾಡುವುದಕ್ಕೆ ಗುರ್ಣಾಹರ್ತೆಗಳನ್ನು ಹೊರತುಪಡಿಸಿ ಅಪೀಲನ್ನು ಪರಿಗಣಿಸುವುದಕ್ಕೆ ಈ ನ್ಯಾಯಾಲಯವು ಅಧಿಕಾರವ್ಯಾಪ್ತಿ ಹೊಂದಿಲ್ಲ ಎಂಬುದನ್ನು ತಿಳಿಸುತ್ತದೆ.

8. ಇಲ್ಲಿ ಅಪೀಲುಗಳು ಇತ್ಯರ್ಥದಲ್ಲಿರುವಾಗಲೇ 22.03.2008 ರಂದು ಪ್ರತ್ಯರ್ಜಿದಾರ ಸಂಖ್ಯೆ.1 ಇವನು ಮರಣ ಹೊಂದಿರುವುದು ವಿವಾದಾಂಶವಾಗಿರುವುದಿಲ್ಲ. ಅಪೀಲುಗಳು ಇತ್ಯರ್ಥದಲ್ಲಿರುವಾಗಲೇ ಪ್ರತ್ಯರ್ಜಿದಾರ ಸಂ.1 ಮರಣವನ್ನಪ್ಪಿರುವ ಕಾರಣದಿಂದ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 394ನೇ ಪ್ರಕರಣದ ದೃಷ್ಟಿಯಿಂದ ಈ ನ್ಯಾಯಾಲಯ ಪ್ರತ್ಯರ್ಜಿದಾರ ಸಂ.1 ವಿರುದ್ಧದ ಅಪೀಲುಗಳನ್ನು ಮುಕ್ತಾಯಗೊಳಿಸಿ ವಿಲೇ ಮಾಡುವುದನ್ನು ಹೊರತಾಗಿ ಪ್ರತ್ಯರ್ಜಿದಾರ ಸಂ.1 ವಿರುದ್ಧ ಅಪೀಲುಗಳಲ್ಲಿ ಮತ್ತಷ್ಟು ಮುಂದುವರೆಯುವುದಕ್ಕೆ ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಆದಾಗ್ಯೂ, ಅಪೀಲುಗಳನ್ನು ವಿಲೇ ಮಾಡುವ ಸಮಯದಲ್ಲಿ ಮರಣವನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ.

9. ತೀರ್ಪು ಸಹಿಯಾದ ನಂತರದಲ್ಲಿ ಆ ತೀರ್ಪನ್ನು ಮಾರ್ಪಾಡು ಮಾಡುವುದಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 362ನೇ ಪ್ರಕರಣದ ಅಡಿಯಲ್ಲಿ ಪ್ರತಿಷೇಧಿತವಾಗಿರುವ ದೃಷ್ಟಿಯಲ್ಲಿ, ಅಪೀಲುಗಳು ಇತ್ಯರ್ಥದಲ್ಲಿರುವ ಸಮಯದಲ್ಲಿ ಮರಣವನ್ನಪ್ಪಿದ ಪ್ರತ್ಯರ್ಜಿದಾರ ಸಂ.1 ವಿರುದ್ಧ ಅಪೀಲುಗಳಲ್ಲಿ 28.07.2010 ರಂದು ನೀಡಿದ ತೀರ್ಪನ್ನು ಮರುಪರಿಶೀಲಿಸುವುದಕ್ಕೆ ಅದು ಅನುಮತಿಸುತ್ತದೆಯೇ ಎಂಬುದು ಈಗಿನ ಪ್ರಶ್ನೆಯಾಗಿದೆ ?

10. ನಮ್ಮ ಅಭಿಪ್ರಾಯದಲ್ಲಿ, ಮೊಕದ್ದಮೆಯ ತೀರ್ಪು ಅಥವಾ ಅಂತಿಮ ಆದೇಶ ವಿಲೇಯಾಗಿದ್ದರೆ. ಅದು ಕಾನೂನಿನಲ್ಲಿ ಅಕೃತತೆಯಾಗಿ ದಂಡ ಪ್ರಕ್ರಿಯಾ

ಸಂಹಿತೆಯ ಅಡಿಯಲ್ಲಿನ ಪ್ರತಿಷೇಧವು ಕಾರ್ಯಗತವಾಗುವುದಿಲ್ಲ. ಕಾನೂನಿನಲ್ಲಿ ಅಕೃತತೆಯಾಗಿರುವ ಮೃತ ವ್ಯಕ್ತಿಯ ವಿರುದ್ಧ ಈ ತೀರ್ಮ ಅಥವಾ ಹೊರಡಿಸಿದ ಆದೇಶವನ್ನು ಕಾನೂನಿನ ಸ್ಥಿತಿಯಲ್ಲಿ ಇತ್ಯರ್ಥಪಡಿಸಬೇಕಾಗುತ್ತದೆ. ಈ ನ್ಯಾಯಾಲಯ ಅಕೃತತೆಯಾಗಿರುವ ಪ್ರತ್ಯರ್ಜಿದಾರ ಸಂಖ್ಯೆ. 1 ಇವರ ವಿರುದ್ಧ ಈ ಎಲ್ಲ ಅಪೀಲುಗಳಲ್ಲಿ ದಿನಾಂಕ 28.07.2010ರಲ್ಲಿ ನೀಡಿದ ಸಾಮಾನ್ಯ ತೀರ್ಪಿನಲ್ಲಿ ಪ್ರತ್ಯರ್ಜಿದಾರ ಸಂಖ್ಯೆ 1 – ಸ್ವಾಮಿಗೌಡನ ಮರಣವನ್ನು ಗಮನಕ್ಕೆ ತಂದುಕೊಳ್ಳದೆ ಅಪೀಲುಗಳನ್ನು ವಿಲೇ ಮಾಡಿರುತ್ತದೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 394ನೇ ಪ್ರಕರಣದ ದೃಷ್ಟಿಯಲ್ಲಿ ಅದು ಮರುವಿಚಾರಣೆಯನ್ನು ಅಗತ್ಯಪಡಿಸುತ್ತದೆ. ತದನುಸಾರವಾಗಿ ಅದನ್ನು ಮರು ವಿಚಾರಣೆ ಮಾಡುವುದು. ಪ್ರತ್ಯರ್ಜಿದಾರ ಸಂ.1ರ ವಿರುದ್ಧ ಇರುವ ಎಲ್ಲ ಅಪೀಲುಗಳನ್ನು ಮುಕ್ತಾಯವಾದಂತೆ, ವಿಲೇ ಮಾಡುವುದು. ಪ್ರತ್ಯರ್ಜಿದಾರ ಸಂ.2ರ ವಿರುದ್ಧ ದಿನಾಂಕ 28.07.2010 ರಂದು ಹೊರಡಿಸಿದ ಸಾಮಾನ್ಯ ತೀರ್ಪಿನ ಎಲ್ಲ ಅಪೀಲುಗಳು ನಿರಾತಂಕವಾಗಿ ಉಳಿಯುತ್ತವೆ. ಈ ಆದೇಶವನ್ನು ದಿನಾಂಕ 28.07.2010ರ ಸಾಮಾನ್ಯ ತೀರ್ಪಿನ ಭಾಗದಂತೆಯೇ ಪರಿಗಣಿಸತಕ್ಕದ್ದು. ಅದಕ್ಕೆ ಅನುಸಾರವಾಗಿ ಐಎ ಸಂ.1/2016ನ್ನು ವಿಲೇ ಮಾಡಲಾಗಿದೆ. ಮಧ್ಯಂತರ ತಡೆಯಾಜ್ಞೆಗಾಗಿ ಐಎ ಸಂ.2/2016 ರಲ್ಲಿ ದಾಖಲಿಸಿದ ಉಳಿದಿರುವ ಪ್ರತ್ಯರ್ಜಿದಾರನ ಸಂಬಂಧದಲ್ಲಿ ಪರಿಗಣನೆಗೆ ಉಳಿಯುವುದಿಲ್ಲ. ಅದಕ್ಕನುಸಾರವಾಗಿ ವಿಲೇ ಮಾಡಲಾಗಿದೆ.

---